ಪ್ರವಾಸ

# ಟಿಟಿಕಾಕ ಸರೋವರದ ತೇಲುವ ಹಳ್ಳಿಗಳು



**ದಕ್ಷಿಣ ಅಮೆರಿಕದ ಅತಿ ದೊಡ್ಡ ಸಿಹಿನೀರಿನ ಸರೋವರವಾದ 'ಟಿಟಿಕಾಕ' ಉರೊ ಬುಡಕಟ್ಟು ಜನರಿಗೆ ನೆಲೆಯೂ ಹೌದು. ಸರೋವರದ ನೀರ ಮೇಲೆಯೇ ಉರೊಗಳು ತೇಲುವ ಹಳ್ಳಿಗಳನ್ನು ಕಟ್ಟಿಕೊಂಡಿದ್ದಾರೆ.**

**■ ಡಿ.ಜಿ. ಮಲ್ಲಿಕಾರ್ಜುನ**

ಪೆರು ಮತ್ತು ಬೊಲಿವಿಯಾ ದೇಶಗಳ ಮಧ್ಯೆ ಆಂಡಿಸ್ ಪರ್ವತಗಳ ನಡುವೆ ಇದೆ ಮೋಹಕ ನೀಲಿ ಬಣ್ಣದ ಟಿಟಿಕಾಕ ಸರೋವರ. ದಕ್ಷಿಣ ಅಮೆರಿಕದ ಅತ್ಯಂತ ದೊಡ್ಡ ಸಿಹಿನೀರಿನ ಸರೋವರ ಎಂದು ಇದು ಹೆಸರಾಗಿದೆ.

ಟಿಟಿಕಾಕ ಸರೋವರದ ಪಶ್ಚಿಮ ತೀರ ಪೆರುವಿನಲ್ಲಿದ್ದರೆ, ಪೂರ್ವ ತೀರ ಬೊಲಿವಿಯಾ ದೇಶದಲ್ಲಿದೆ. ಈ ಸರೋವರದ ಉದ್ದ 194 ಕಿ.ಮೀ. ಅಗಲ ಸುಮಾರು 80 ಕಿ.ಮೀ. ಆಳ 350 ಅಡಿಯಿಂದ 900 ಅಡಿವರೆಗೂ ಇದೆ. ಈ ಸರೋವರ ಸಮುದ್ರ ಮಟ್ಟದಿಂದ 12,500 ಅಡಿ ಎತ್ತರದಲ್ಲಿದೆ. ಹಾಗಾಗಿ ಇದನ್ನು ಪ್ರಪಂಚದ ಅತಿ ಎತ್ತರದ ಹಡಗುಗಳು ಪ್ರಯಾಣಿಸುವ ಸರೋವರ ಎನ್ನುತ್ತಾರೆ. ಬೊಲಿವಿಯಾ ಭಾಗದಲ್ಲಿ ಹಲವು ಪರ್ವತಗಳಿದ್ದು, ಅದರಿಂದ ಹಲವಾರು ನದಿಗಳು ಮತ್ತು ತೊರೆಗಳು ಟಿಟಿಕಾಕ ಸರೋವರಕ್ಕೆ ಬಂದು ಸೇರುತ್ತವೆ. ಸರೋವರದ ಶೇಕಡಾ 10ರಷ್ಟು ನೀರು ಡೆಸ್ ಗ್ವಡೀರೊ ಎಂಬ ನದಿಯಾಗಿ ಮುಂದೆ ಹರಿದರೆ, ಉಳಿದ ಶೇಕಡಾ 90ರಷ್ಟು ನೀರು ಆವಿಯಾಗುತ್ತದೆ.

ಪೆರು ಮತ್ತು ಬೊಲಿವಿಯಾ ದೇಶಗಳ ನಡುವೆ ಈ ಸರೋವರ ಸಾಕಷ್ಟು ವಾಣಿಜ್ಯೋದ್ಯಮ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ.

ಭವ್ಯವಾದ ಆಂಡಿಸ್ ಪರ್ವತಗಳಿಂದ ಸುತ್ತುವರೆದಿರುವ ಟಿಟಿಕಾಕ ಸರೋವರದ ವೈಶಿಷ್ಟ್ಯ, ಅದರ ಗಾಢ ನೀಲಿ ಬಣ್ಣ. ದೃಶ್ಯ ವೈಭವದ ಜೊತೆಗೆ ಅಪರೂಪದ ಜೀವವೈವಿಧ್ಯಕ್ಕೂ ಇದು ತಾಣವಾಗಿದೆ. ಅಪರೂಪದ ಮೀನುಗಳು ಮತ್ತು ಹಕ್ಕಿಗಳು ಇಲ್ಲಿವೆ. ಇಲ್ಲಿನ ಹವಾಮಾನವು ವಿವಿಧ ಸಸ್ಯವರ್ಗವನ್ನೂ ಪೋಷಿಸಿವೆ. ಅವುಗಳಲ್ಲಿ ಜೊಂಡಿನ ಜಾತಿಯ ಸಸ್ಯ ವಿವಿಧ ಜೀವಿಗಳೊಂದಿಗೆ ಮಾನವರಿಗೂ ಆಶ್ರಯ ನೀಡಿದೆ.

